# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಡಿ.ಎನ್.ಎ ಸಂಶೋಧನಾ ಸಂಸ್ಥೆಗೆ ಯಂತ್ರೋಪಕರಣ ನಿರ್ವಹಣೆ ಹಾಗೂ ಮೂಲಭೂತ ಸೌಕರ್ಯಗಳನ್ನು ಹೊಂದಲು ಹಾಗೂ ಸಿಬ್ಬಂದಿಗಳ ವೇತನ ಪಾವತಿಗಾಗಿ ಅನುದಾನ ಒದಗಿಸುವ ಕುರಿತು.

*****

ಓದಲಾಗಿದೆ:-

1. ನಿರ್ದೇಶಕರು, ಕರ್ನಾಟಕ ಡಿಎನ್ಎ ಸಂಶೋಧನಾ ಸಂಸ್ಥೆ, ಧಾರವಾಡ ಇವರ ಪ್ರಸ್ತಾವನೆ ಸಂಖ್ಯೆ:KIDNAR/661, ದಿನಾಂಕ: 22.04.2022.
2. ಸರ್ಕಾರದ ಪತ್ರ ಸಂಖ್ಯೆ: ಆಇ 03 ಬಿಎಸ್‌ಜಿ 2022, ದಿನಾಂಕ: 19/10/2022

ಪ್ರಸ್ತಾವನೆ:-

ಮೇಲೆ ಕ್ರಮಾಂಕ (1)ರಲ್ಲಿ ಓದಲಾದ ದಿನಾಂಕ: 22.04.2022ರ ಪ್ರಸ್ತಾವನೆಯಲ್ಲಿ ನಿರ್ದೇಶಕರು, ಕರ್ನಾಟಕ ಡಿಎನ್ಎ ಸಂಶೋಧನಾ ಸಂಸ್ಥೆ, ಧಾರವಾಡ ಇವರು ಕರ್ನಾಟಕ ಡಿ.ಎನ್.ಎ. ಸಂಶೋಧನ ಸಂಸ್ಥೆ (KIDNAR)ಗೆ ಕಳೆದ ನಾಲ್ಕು ವರ್ಷದಿಂದ ರಾಜ್ಯ ಸರ್ಕಾರದಿಂದ ಯಾವುದೇ ಅನುದಾನವನ್ನು ಒದಗಿಸಿರುವುದಿಲ್ಲ. ಆದುದರಿಂದ, ಹೊಸ ತಂತ್ರಜ್ಞಾನ ಹೊಂದಿದ ಯಂತ್ರೋಪಕರಣಗಳು, ದಶಕದ ಹಿಂದೆ ಖರೀದಿಸಿರುವ ಯಂತ್ರೋಪಕರಣಗಳ ನಿರ್ವಹಣೆ ಹಾಗೂ ಸಂಶೋಧನೆಗೆ ಬೇಕಾಗುವ ವಿವಿಧ ಬಗೆ ಸೌಕರ್ಯಗಳನ್ನು ಹೊಂದಲು ಮತ್ತು ಸದ್ಯ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ವೇತನ ಪಾವತಿಸಲು ಈ ಕೆಳಕಂಡಂತೆ ಅನುದಾನವನ್ನು ಒದಗಿಸುವಂತೆ ಕೋರಿರುತ್ತಾರೆ.

| Sl.No. | Broad Head | Approximate Amount |
|---|---|---|
| 1 | New Equipments/up gradation of existing equipments and maintenance of equipments | 87,00,000 |
| 2 | Consumables (Kits/arrays/chemicals/plastic wares/glass wares | 10,00,000 |
| 3 | Maintenance of Laboratory and Institution Building | 23,00,000 |
| 4 | Travel for field work and sample collection | 03,00,000 |
| 5 | Salary for the staff advanced essential training for the staff, publication fees, TA, DA, Registration fees etc., for attending National and International conference | 50,00,000 |
| 6 | Contingencies/Miscellaneous | 02,00,000 |
| | Total | 1,75,00,000 |

ಮೇಲೆ ಕ್ರಮಾಂಕ (2)ರಲ್ಲಿ ಒದಲಾದ ಪತ್ರದಲ್ಲಿ 2022-23ನೇ ಸಾಲಿನ ಪೂರಕ ಅಂದಾಜುಗಳಿಗೆ (ಮೊದಲನೇ ಕಂತು) ಅನುಮೋದನೆ ದೊರೆತಿರುವ ಪ್ರತಿಯನ್ನು ಲಗತ್ತಿಸಿ, ಪೂರಕ ಅಂದಾಜುಗಳಲ್ಲಿ ಒದಗಿಸಲಾದ ಮೊತ್ತವನ್ನು ಆರ್ಥಿಕ ಇಲಾಖೆ ಅನುಮತಿ ಇದೆಯೆಂದು ಭಾವಿಸಿ ಬಿಡುಗಡೆ ಮಾಡಲು ಇಲಾಖಾ ಕಾರ್ಯದರ್ಶಿಯವರಿಗೆ ಅಧಿಕಾರ ಪ್ರತ್ಯಾಯೋಜಿಸಿದೆ ಎಂದು ತಿಳಿಸಲಾಗಿದೆ. ಸದರಿ ಪೂರಕ ಅಂದಾಜು-1ರಲ್ಲಿ ಧಾರವಾಡದ ಕರ್ನಾಟಕ ಡಿ.ಎನ್.ಎ ಸಂಶೋಧನಾ ಸಂಸ್ಥೆಗೆ ಯಂತ್ರೋಪಕರಣ ನಿರ್ವಹಣೆ ಹಾಗೂ ಮೂಲಭೂತ ಸೌಕರ್ಯಗಳನ್ನು ಹೊಂದಲು ಹಾಗೂ ಸಿಬ್ಬಂದಿಗಳ ವೇತನಕ್ಕಾಗಿ ಲೆಕ್ಕ ಶೀರ್ಷಿಕೆ: 2202-03-112-0-15-103-ಸಹಾಯಾನುದಾನ-ಸಾಮಾನ್ಯ ಅಡಿಯಲ್ಲಿ ರೂ.100.00 ಲಕ್ಷಗಳನ್ನು ಒದಗಿಸಿದೆ.

ಸರ್ಕಾರವು ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

<u>ಸರ್ಕಾರದ ಆದೇಶ ಸಂಖ್ಯೆ: ಇಡಿ 24 ಹೆಚ್‌ಪಿಯು 2022.</u>
<u>ಬೆಂಗಳೂರು, ದಿನಾಂಕ: 31ನೇ ಅಕ್ಟೋಬರ್, 2022.</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಧಾರವಾಡದ ಕರ್ನಾಟಕ ಡಿ.ಎನ್.ಎ ಸಂಶೋಧನಾ ಸಂಸ್ಥೆಗೆ ಯಂತ್ರೋಪಕರಣ ನಿರ್ವಹಣೆ ಹಾಗೂ ಮೂಲಭೂತ ಸೌಕರ್ಯಗಳನ್ನು ಹೊಂದಲು ಹಾಗೂ ಸಿಬ್ಬಂದಿಗಳ ವೇತನಕ್ಕಾಗಿ 2022-23ನೇ ಆರ್ಥಿಕ ಸಾಲಿನ "ಉನ್ನತ ಶಿಕ್ಷಣ ಅಕಾಡೆಮಿ ಸೇರಿದಂತೆ ಸುಧಾರಣೆಗಳ ಮೂಲಕ ಶಿಕ್ಷಣದಲ್ಲಿ ಉತ್ಕೃಷ್ಟತೆ ಲೆಕ್ಕ ಶೀರ್ಷಿಕೆ:2202-03-112-0-15-103-ಸಹಾಯಾನುದಾನ-ಸಾಮಾನ್ಯ ಅಡಿಯಲ್ಲಿ" ಹೆಚ್ಚುವರಿಯಾಗಿ ಒದಗಿಸಿರುವ ರೂ.100.00ಲಕ್ಷಗಳನ್ನು ಬಿಡುಗಡೆಗೊಳಿಸಿದ್ದು, ಧಾರವಾಡ ಉನ್ನತ ಶಿಕ್ಷಣ ಅಕಾಡೆಮಿಯ ನಿರ್ದೇಶಕರು ಸದರಿ ಅನುದಾನವನ್ನು ಸೆಳೆದು ಧಾರವಾಡದ ಕರ್ನಾಟಕ ಡಿ.ಎನ್.ಎ ಸಂಶೋಧನಾ ಸಂಸ್ಥೆಗೆ ಬಿಡುಗಡೆಗೊಳಿಸಲು ಆದೇಶಿಸಿದೆ.

ಷರತ್ತುಗಳು;-

1. ಈ ಅನುದಾನವನ್ನು ಯಾವ ಉದ್ದೇಶಕ್ಕಾಗಿ ಒದಗಿಸಲಾಗಿದೆಯೋ ಅದೇ ಉದ್ದೇಶಕ್ಕಾಗಿ ವೆಚ್ಚ ಮಾಡತಕ್ಕದ್ದು;
2. ಪ್ರಸ್ತಾಪಿತ ಕಾರ್ಯಚಟುವಟಿಕೆಗಳನ್ನು ಕಡ್ಡಾಯವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮಗಳನ್ವಯ ನಿಯಮಾನುಸಾರ ಟೆಂಡರ್ ಪ್ರಕ್ರಿಯೆ ಮೂಲಕವೇ ಕೈಗೊಳ್ಳುವುದು;
3. ತತ್ಸಂಬಂಧಿತ ಜಿ.ಐ.ಎ. ಬಿಲ್ಲನ್ನು ಸಂಬಂಧಿತ ಕಾಲೇಜು ಶಿಕ್ಷಣ ಇಲಾಖೆಯ ಆಯಾ/ಸಂಬಂಧಿತ ಜಂಟಿ ನಿರ್ದೇಶಕರುಗಳು, ಸಲ್ಲಿಸಿದ ಬಿಲ್ಲುಗಳಿಗೆ ಮೇಲು ರುಜು ಮಾಡಲು ಅಧಿಕೃತಗೊಳಿಸಲಾಗಿದೆ. ಸದರಿ ಸಹಾಯಾನುದಾನದ ಬಿಲ್ಲುಗಳನ್ನು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 02 ಎಫ್‌ಆರ್‌ಸಿ 2003, ದಿನಾಂಕ: 27.12.2004ರ ಸರ್ಕಾರಿ ಆದೇಶದಲ್ಲಿನ ಸೂಚನೆಗಳನ್ವಯ ಅನುದಾನದ ಬಿಲ್ಲುಗಳಿಗೆ ಕಾಲೇಜು ಶಿಕ್ಷಣ ಇಲಾಖೆಯ ಸಂಬಂಧಿತ ಪ್ರಾದೇಶಿಕ ಜಂಟಿ ನಿರ್ದೇಶಕರುಗಳು ಇವರು ಮೇಲು ರುಜುವಿನೊಂದಿಗೆ ರಾಜ್ಯ ಹುಜೂರು ಖಜಾನಾಧಿಕಾರಿಗಳಿಗೆ/ಜಿಲ್ಲಾ ಖಜಾನಾಧಿಕಾರಿಗಳಿಗೆ

ಕಳುಹಿಸಿ ನೇರವಾಗಿ ಸಂಬಂಧಿತ ಸಿಬ್ಬಂದಿ ಖಾತೆಗೆ ಜಮಾ ಮಾಡಲು ಕ್ರಮವಹಿಸತಕ್ಕದ್ದು;

4. ಡಿ.ಎನ್.ಎ., ಸಂಸ್ಥೆಗೆ 2022-23ನೇ ಸಾಲಿಗೆ ಬಿಡುಗಡೆ ಮಾಡಲಾದ ಅನುದಾನದ ಮೊತ್ತದ ಓಚರ್ ಸಂಖ್ಯೆ ಇತ್ಯಾದಿ ವಿವರಗಳನ್ನು ಸಂಬಂಧಪಟ್ಟ ಖಜಾನೆ ಇಲಾಖೆಯಿಂದ ಪಡೆದು ಮಹಾಲೇಖಪಾಲರ ಕಛೇರಿಯ ಅಂಕಿಗಳೊಂದಿಗೆ ಮರು ಹೊಂದಾಣಿಕೆ (Reconciliation) ಮಾಡಿ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು. ಮರು ಹೊಂದಾಣಿಕೆಗೆ ಸಂಬಂಧಿಸಿದ ಯಾವುದೇ ಲೋಪದೋಷಗಳಿದ್ದಲ್ಲಿ ಮಹಾಲೇಖಪಾಲರ ಕಛೇರಿಯನ್ನು ಸಂಪರ್ಕಿಸಿ ಸರಿಪಡಿಸಿಕೊಳ್ಳತಕ್ಕದ್ದು;
5. ಕರ್ನಾಟಕ ಬಜೆಟ್ ಕೈಪಿಡಿ ಪ್ಯಾರಾ-251 ಹಾಗೂ ಕರ್ನಾಟಕ ಆರ್ಥಿಕ ಸಂಹಿತೆ ಆರ್ಟಿಕಲ್-346 ರನ್ವಯ ಇಲಾಖೆ ಜಮೆ ಮತ್ತು ವೆಚ್ಚಗಳ ಲೆಕ್ಕಹೊಂದಾಣಿಕೆಯನ್ನು ಪ್ರತಿ ತಿಂಗಳು ಮಾಡತಕ್ಕದ್ದು. ಇದು ಆದ್ಯ ಕರ್ತವ್ಯವಾಗಿರುತ್ತದೆ. ಆದಾಗ್ಯೂ ಸಲ್ಲಿಸದೇ ಇರುವುದು ಕಂಡು ಬಂದ ಹಿನ್ನಲೆಯಲ್ಲಿ, ಮಹಾಲೇಖಪಾಲರ ನಿರ್ದೇಶನದಂತೆ ಲೆಕ್ಕಹೊಂದಾಣಿಕೆ ಪಟ್ಟಿಯನ್ನು ದೃಢೀಕರಿಸಿ ಸಲ್ಲಿಸಿದ ಕೂಡಲೇ ಅನುದಾನ ಬಿಡುಗಡೆ ಮಾಡುವುದು;
6. ಸದರಿ ಅನುದಾನವನ್ನು ಬಿಡುಗಡೆ ಮಾಡಿರುವ ಉದ್ದೇಶಕ್ಕಾಗಿ ಮಾತ್ರ ಬಳಸತಕ್ಕದ್ದು. ಅನುದಾನವನ್ನು ಬೇರೆ ಯಾವುದೆ ಉದ್ದೇಶಕ್ಕೆ/ಉಪಯೋಗಕ್ಕೆ ಬಳಸಿದ್ದಲ್ಲಿ ನೇರವಾಗಿ ಡಿ.ಎನ್.ಎ., ಸಂಸ್ಥೆಯ ನಿರ್ದೇಶಕರನ್ನು ಜವಾಬ್ದಾರರನ್ನಾಗಿ ಮಾಡಲಾಗುವುದು ಹಾಗೂ ಅವರಿಂದಲೇ ದಂಡಸಮೇತ ಮೊತ್ತವನ್ನು ವಸೂಲಾತಿ ಮಾಡಲಾಗುವುದು;
7. ಅನುದಾನದ ಬಳಕೆಯಲ್ಲಿ ಯಾವುದೆ ರೀತಿಯ ಪುನರಾವರ್ತನೆ ಆಗಬಾರದು. ಬಿಡುಗಡೆ ಆಗಿರುವ ಅನುದಾನವನ್ನು ಹಾಗೂ ಪ್ರತಿ ತಿಂಗಳು ಸಾಧಿಸುವ ಆರ್ಥಿಕ ಮತ್ತು ಭೌತಿಕ ಪ್ರಗತಿಯ ವಿವರಗಳನ್ನು ಸಂಸ್ಥೆಯ ಜಾಲತಾಣದಲ್ಲಿ ಕಡ್ಡಾಯವಾಗಿ ಸಂಸ್ಥೆಯ ಮುಖ್ಯಸ್ಥರು ಅಳವಡಿಸತಕ್ಕದ್ದು;
8. ಅನುದಾನ ಬಳಕೆ ಮಾಡಲು ಸಾಧ್ಯವಾಗದಿದ್ದಲ್ಲಿ ನಿಯಮಾನುಸಾರ ಸರ್ಕಾರಕ್ಕೆ ಅಧ್ಯರ್ಪಣೆ ಮಾಡತಕ್ಕದ್ದು.
9. ಇದುವರೆಗೆ ಬಿಡುಗಡೆ ಮಾಡಿರುವ ಅನುದಾನದ ಬಳಕೆಗೆ ನಿಗಧಿತ ನಮೂನೆಯಲ್ಲಿ ಬಳಕೆ ಪ್ರಮಾಣ ಪತ್ರ ಸಲ್ಲಿಸತಕ್ಕದ್ದು;
10. ಈ ಕಾರ್ಯಕ್ರಮವನ್ನು ಸಕ್ಷಮ ಪ್ರಾಧಿಕಾರದ ಅನುಮೋದನೆಯೊಂದಿಗೆ ಅನುಷ್ಠಾನಗೊಳಿಸುವುದು. ಈ ಉದ್ದೇಶಕ್ಕಾಗಿ ಯಾವುದೇ ಹೆಚ್ಚುವರಿ ಅನುದಾನ ಕೋರತಕ್ಕದ್ದಲ್ಲ.
11. ಸರ್ಕಾರದಿಂದ ಅನುಮೋದಿತ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಆದ್ಯತೆ ಮೇರೆಗೆ ವೇತನ ಪಾವತಿಸಿ, ಉಳಿದ ಅನುದಾನದಲ್ಲಿ ಅತ್ಯಗತ್ಯ ಕಾರ್ಯಚಟುವಟಿಕೆಗಳನ್ನು ಸಕ್ಷಮ ಪ್ರಾಧಿಕಾರದ ಅನುಮೋದನೆಯೊಂದಿಗೆ ನಿಯಮಾನುಸಾರ ಅನುಷ್ಠಾನಗೊಳಿಸತಕ್ಕದ್ದು.
12. ಯೋಜನೆ ಅನುಷ್ಠಾನದಲ್ಲಿ ಯಾವುದೇ ರೀತಿಯ ಲೋಪದೋಷಗಳು ಕಂಡುಬಂದಲ್ಲಿ ನೇರವಾಗಿ ಡಿ.ಎನ್.ಎ., ಸಂಸ್ಥೆಯ ನಿರ್ದೇಶಕರನ್ನೇ ನೇರ ಹೊಣೆಗಾರರಾಗಿರುತ್ತಾರೆ.
13. ಈ ಯೋಜನೆಯಲ್ಲಿ ಅನುಷ್ಠಾನಗೊಳಿಸುತ್ತಿರುವ ಕಾರ್ಯಚಟುವಟಿಕೆಗಳು ಪುನರಾವರ್ತನೆ ಆಗದಂತೆ ನೋಡಿಕೊಳ್ಳುವುದು. ಒಂದು ವೇಳೆ ಹಿಂದಿನ

ಕಾರ್ಯಕ್ರಮದಲ್ಲಿ ಅಥವಾ ಮುಂಬರುವ ಕಾರ್ಯಕ್ರಮಗಳಲ್ಲಿ ಈ ಕಾರ್ಯಚಟುವಟಿಕೆಗಳು ಪುನರಾವರ್ತನೆಯಾದಲ್ಲಿ ಡಿ.ಎನ್.ಎ., ಸಂಸ್ಥೆಯ ನಿರ್ದೇಶಕರನ್ನು ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.

14. ಅನುದಾನದ ಬಿಡುಗಡೆಯ ವಿವರಗಳು ಹಾಗು ಕಾರ್ಯಕ್ರಮ/ಕಾರ್ಯಚಟುವಟಿಕೆಗಳ ವಿವರಗಳನ್ನು, ಬಳಕೆಯ ವಿವರಗಳನ್ನು ಕಡ್ಡಾಯವಾಗಿ ಸಂಸ್ಥೆಯ ಜಾಲತಾಣದಲ್ಲಿ ಪ್ರಕಟಿಸತಕ್ಕದ್ದು. ಪ್ರತಿ ತಿಂಗಳು ಆರ್ಥಿಕ ಮತ್ತು ಭೌತಿಕ ಪ್ರಗತಿಯನ್ನು ಸಹ ಸಂಸ್ಥೆಯ ಜಾಲತಾಣದಲ್ಲಿ ಅಳವಡಿಸತಕ್ಕದ್ದು.
15. ಕಾರ್ಯಕ್ರಮ ಅನುಷ್ಠಾನಗೊಳಿಸಿದ ಬಗ್ಗೆ ಅನುಸರಣಾ ವರದಿಯನ್ನು ಮತ್ತು ಬಳಕೆ ಪ್ರಮಾಣ ಪತ್ರವನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು;

ಈ ಆದೇಶವನ್ನು ಆರ್ಥಿಕ ಇಲಾಖೆಯು ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ 172 ವೆಚ್ಚ-8/2022, ದಿನಾಂಕ: 05.09.2022ರಲ್ಲಿನ ಸಹಮತಿ ಹಾಗೂ ಸರ್ಕಾರದ ಪತ್ರ ಸಂಖ್ಯೆ: ಆಇ 03 ಬಿಎಸ್‌ಜಿ 2022, ದಿನಾಂಕ: 19.10.2022ರಲ್ಲಿನ ಅನುಮತಿ ಹಾಗೂ ಆರ್ಥಿಕ ಅಧಿಕಾರ ಪ್ರತ್ಯಾಯೋಜನೆಯಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಹಾಗೂ ಅವರ ಹೆಸರಿನಲ್ಲಿ,
31/10/2022
(ಎಂ.ಜಿ.ವೆಂಕಟೇಶಯ್ಯ)
ಸರ್ಕಾರದ ಉಪ ಕಾರ್ಯದರ್ಶಿ,
(ತಾಂತ್ರಿಕ ಶಿಕ್ಷಣ ಮತ್ತು ಯೋಜನೆ)
ಉನ್ನತ ಶಿಕ್ಷಣ ಇಲಾಖೆ.

ಇವರಿಗೆ:-

1. ಪ್ರಧಾನ ಮಹಾಲೇಖಪಾಲರು (ಲೆಕ್ಕಪತ್ರಗಳು ಮತ್ತು ಹಕ್ಕುಗಳು) ಬೆಂಗಳೂರು-560001.
2. ನಿರ್ದೇಶಕರು, ಉನ್ನತ ಶಿಕ್ಷಣ ಅಕಾಡೆಮಿ, ಧಾರವಾಡ
3. ನಿರ್ದೇಶಕರು, ಕರ್ನಾಟಕ ಡಿಎನ್‌ಎ ಸಂಶೋಧನಾ ಸಂಸ್ಥೆ, ಧಾರವಾಡ.
4. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
5. ಕಾಲೇಜು ಶಿಕ್ಷಣ ಇಲಾಖೆಯ ಪ್ರಾದೇಶಿಕ ಜಂಟಿ ನಿರ್ದೇಶಕರು, ಧಾರವಾಡ ವಿಭಾಗ, ಧಾರವಾಡ.
6. ನಿರ್ದೇಶಕರು, ಖಜಾನೆ ಇಲಾಖೆ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, ಡಾ. ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು.
7. ಜಿಲ್ಲಾ ಖಜಾನಾಧಿಕಾರಿಗಳು, ಧಾರವಾಡ ಜಿಲ್ಲೆ, ಧಾರವಾಡ.
8. ಉಪ-ನಿರ್ದೇಶಕರು, ಖಜಾನೆ ಗಣಕ ಕೇಂದ್ರ, ನಂ.49, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ,ಬೆಂಗಳೂರು.
9. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬಹು ಮಹಡಿಗಳ ಕಟ್ಟಡ, ಬೆಂಗಳೂರು.
10. ಸರ್ಕಾರದ ಜಂಟಿ ಕಾರ್ಯದರ್ಶಿ-2, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
11. ವಿಶೇಷಾಧಿಕಾರಿ, ಶಿಕ್ಷಣ ಇಲಾಖೆ (ಮಾಹಿತಿ ಕೇಂದ್ರ) ಅಂತರ್ಜಾಲದಲ್ಲಿ ಪ್ರಕಟಿಸುವ ಸಲುವಾಗಿ.
12. ಹೆಚ್ಚಿನ ಪ್ರತಿ / ರಕ್ಷಾ ಕಡತ / ಕಡತ ಪ್ರತಿ.